ಬೇಕಾಗಿತ್ತು. ಆದರೆ ದುರದೃಷ್ಟದಿಂದ ಶಾಪವಾಗಿ ಪರಿಣಮಿಸಿದೆ. ಇದುವರೆಗೆ ಕಬ್ಬನ್ನು ಕಾರ್ಖಾನೆಗೆ ಸರಬರಾಜು ಮಾಡಿದ ರೈತರಿಗೆ ಸಕಾಲಕ್ಕೆ ಹಣ ಪಾವತಿಯಾಗದೆ ತೊಂದರೆಯಾಯಿತು. ಇವತ್ತಿನ ದಿವಸ ಕಾರ್ಖಾನೆ ಮುಚ್ಚಲ್ಪಟ್ಟಿದೆ, ಕೆಲಸ ನಡೆಯುತ್ತಿಲ್ಲ. ಅನೇಕ ರೈತರು ಕಬ್ಬನ್ನು ಬೆಳೆದು ೧೪ ತಿಂಗಳು ಆಗಿದೆ. ಕಾರ್ಖಾನೆಯ ಆಡಳಿತಗಾರರನ್ನು ಕೇಳಿದರೆ ಕಾರ್ಖಾನೆ ನಿಂತಿರುವುದರಿಂದ ಕಬ್ಬನ್ನು ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಈಗಾಗಲೇ ಅವಧಿಯಾಗಿರುವ ಕಬ್ಬನ್ನು ಇನ್ನೂ ಬಿಟ್ಟರೆ ಕಬ್ಬಿನಲ್ಲಿರುವ ಸಕ್ಕರೆ ಅಂಶ ಕಡಿಮೆಯಾಗಿ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಈ ಸಂದರ್ಭದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಬೆಲ್ಲ ಮಾಡಿಕೊಳ್ಳುವುದಕ್ಕಾದರೂ ಪರವಾನಗಿ ಕೊಡಲು ಒಪ್ಪುತ್ತಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ರೈತರು ಕಂಗಾಲಾಗಿದ್ದಾರೆ. ಆದ್ದರಿಂದ, ಅವರ ರಕ್ಷಣೆಗೆ ಸರ್ಕಾರ ಬರಬೇಕು. ಆ ಕಬ್ಬಿನಿಂದ ಬೆಲ್ಲ ಮಾಡಲಿಕ್ಕೆ ಪರವಾನಗಿ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುವುದರ ಜೊತೆಗೆ ಪಂಹದೇಶ್ವರ ಸಕ್ಕರೆ ಕಾರ್ಖಾನೆಯ ವಿಷಯದಲ್ಲಿ ಹೆಚ್ಚಾಗಿ ನಾನು ಈಗ ಪ್ರಸ್ತಾಪ ಮಾಡಬೇಕಾಗಿದೆ. ಆದರೆ ಈಗ ಕಾಲಾವಕಾಶ ಇಲ್ಲದಿರುವುದರಿಂದ ಕೊನೇ ಪಕ್ಷ ಮೈಸೂರು ಜಿಲ್ಲೆಯ ಶಾಸಕರನ್ನು ನಿಮ್ಮ ಕೊಠಡಿಗೆ ಕರೆಸಿ ಚರ್ಚೆ ಮಾಡಿ ಆ ಕಾರ್ಖಾನೆಯನ್ನು ಯಾವ ರೀತಿ ನಡೆಸಬೇಕೆಂಬ ವಿಚಾರದಲ್ಲಿ ಒಂದು ಧ್ಯೇಯ ಧೋರಣೆ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮುಖೇನ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಈ ಮಹದೇಶ್ವರ ಸಕ್ಕರೆ ಕಾರ್ಖಾನೆಯ ಬಗ್ಗೆ ಮಾನ್ಯ ರಾಜೂಗೌಡರು ಹೇಳಿದ ಹಾಗೆ, ಅದರಿಂದ ರೈತರಿಗೆ ಏನು ಸಹಾಯ ಆಗಬೇಕಿತ್ತೋ ಆ ರೀತಿಯಾಗದೆ ಅದು ನಷ್ಟದಲ್ಲಿ ಕೆಲಸ ಮಾಡುತ್ತಿದೆ. ಇವತ್ತಿನ ದಿವಸ ಅನೇಕ ಮಾನ್ಯ ಸದಸ್ಯರುಗಳು ೨೫–೫೦ ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆಂದು ಮನವಿ ಮಾಡಿದ್ದಾರೆ. ತಾವು ಹೇಳಿದ ಹಾಗೆ ಮೈಸೂರು ಜಿಲ್ಲೆಯ ಎಲ್ಲ ಸದಸ್ಯರುಗಳನ್ನು, ಜಿಲ್ಲಾಧಿಕಾರಿಗಳನ್ನು ಹಾಗೂ ವಿಭಾಗಾಧಿಕಾರಿಗಳನ್ನು ಕರೆದು ಚರ್ಚೆ ಮಾಡುತ್ತೇನೆ. ಸರ್ಕಾರ ಏನು ಸಹಾಯ ಮಾಡಬೇಕೆಂದು ಅಭಿಪ್ರಾಯ ಬರುತ್ತದೋ ಅದರಂತೆ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಸಹಾಯ ಮಾಡಲಿಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ. ಎಗಡನೆಯದಾಗಿ, ಬೆಲ್ಲ ತಯಾರಿಸುವುದಕ್ಕೆ ಪರವಾನಗಿ ಕೊಡಿ ಎಂದು ಕೇಳುತ್ತಿದ್ದಾರೆ. ಆ ಕಾರ್ಖಾನೆ ಕೆಲಸ ಪ್ರಾರಂಭ ಮಾಡಿದ ಮೇಲೆ ಅದಕ್ಕೆ ಎಷ್ಟು ಕಬ್ಬನ್ನು ಅರೆಯುವ ಸಾಮರ್ಥ್ಯ ಇದೆ ಎಂಬುದನ್ನು ನೋಡಿಕೊಂಡು, ಜಾಸ್ತಿ ಕಬ್ಬು ಬೆಳೆದಿರುವುದು ಕಂಡು ಬಂದರೆ ಬೆಲ್ಲ ಮಾಡುವುದಕ್ಕೆ ಪರವಾನಗಿ ಕೊಡಲು ಸರ್ಕಾರದ ವಿರೋಧವಿಲ್ಲ. ಆದ್ದರಿಂದ, ಅದನ್ನು ಖಂಡಿತ ಪರಿಶೀಲನೆ ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಇದು ಹೈ ಪವರ್ ಕಮಿಟಿಗೆ ಸಂಬಂಧಪಟ್ಟದ್ದು.....

ಅಧ್ಯಕ್ಷರು.—ನಿಮಗೂ ಅದಕ್ಕೂ ಸಂಬಂಧವಿಲ್ಲ, ಯಾರು ನೋಟೀಸ್ ಕೊಟ್ಟಿರುತ್ತಾರೋ ಅವರೇ ಮತ್ತೆ ಸ್ಪಷ್ಟೀಕರಣ ಕೇಳುತ್ತಾರೆ, ಆದ್ದರಿಂದ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಜಿ. ರಾಜೂಗೌಡ.—ಕಾರ್ಖಾನೆ ಇಂತಿಷ್ಟೇ ದಿನಗಳಲ್ಲಿ ಪ್ರಾರಂಭವಾಗುತ್ತದೆಂದು ಗೊತ್ತಿಲ್ಲ. ರೈತರು ಬೆಳೆದ ಕಬ್ಬಿಗೆ ಈಗಾಗಲೇ ೧೪ ತಿಂಗಳು ತುಂಬಿದೆ. ಇನ್ನೂ ನಿಧಾನ ಮಾಡಿದರೆ ಕಬ್ಬಿನಲ್ಲಿರುವ ಸಕ್ಕರೆ ಅಂಶ ಕಡಿಮೆಯಾಗಿ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ, ಅಂಥ ಕಡೆಗಳಲ್ಲಾದರೂ ಬೆಲ್ಲ ಮಾಡಲು ಪರವಾನಗಿ ಕೊಡುವುದಕ್ಕೆ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಅದನ್ನು ವಿಚಾರ ಮಾಡುತ್ತೇನೆ.

MATTER UNDER RULE 312.

re : Injustice done to the SCs/STs allottee of cultivable lands in Bilvardahally near Bannerghatta.

SRI A. LAKSHMISAGAR.—Sir, at the outset, I would like to state that this is a very important matter which requires little more time

to place the entire facts so that suitable action can be taken by the Government.

Sir, this is a classic instance of land grabbing, a land which was granted to Sixteen Harijans, by influential, cunning and rapacious persons in Bilvaradahalli, Anekal Taluk of Bangalore district. The Government of Karnataka granted lands to 16 Scheduled Caste/ Scheduled Tribe persons, two acres each, free of cost in Bilvaradahally out of a plot of land measuring about 400 acres of Gomal under D.D. No. 98/55-56. The respective land grantees soon settled down putting their hutments and started cultivation of lands. Thereafter, soon in early 1960 or so, these Harijans were subjected to miseries by persons, who ultimately grabbed the lands by physically throwing all these Harijans out of their lands. Fire-arms were used against these Harijans. They were assaulted and hunted like mad Dogs. The police actively assisted the land grabbers against the interest of the Scheduled Castes/Scheduled Tribes. Ultimately, they were forced to sign the sale-deeds for a paltry sum of Rs.250 per acre, to one Shri K. K. Sherif and his daughter. All these took place in-between 1st July 1967 to 13th November 1968. Sir, this is how the lands were completely taken out of the hands of the grantees given to them by the Government free of cost. The lands standing in the name of Sri K. K. Sherif and his daughter, 26 and 6 acres respectively, were sold on 6th August 1970 to one Smt. Habibunnisa w/o Abdul Jabbar, said to be the sister-in-law of Sri Mohammed Ali, the then Minister, purchased 10 acres of land out of 32 acres. One Smt. Waheeda Begum wife of Sri Mohammad Ali namely the Minister, purchased the 17 acres and 21 guntas on 9-6-70.

MR. SPEAKER.—Under Rule 312, you have to be brief in your submission. If you want to say so many things in detail you can speak on the demands pertaining to the Revenue Department. In this case, I must follow the rules.

SRI H. D. DEVEGOWDA.—I may assure the Hon. Speaker that we shall co-operate with him in passing the demands listed in the agenda.

SRI A. LAKSHMISAGAR.—This is a classic case of land grant granted to Harijans free of cost, by influential persons. I started by saying rapacious cunning wolves to grab the land. This is the classic case and the Government should open its eyes and see that such things are not repeated elsewhere. This fact I am trying to bring to the notice of the Government and to the House through the Chair. I took permission to have little more time than is generally taken, in matters coming under rule 312. I have spent several days for the

purpose of collecting information. I have irrefutable documents and all these documents are with me, Therefore I am seeking your kind indulgence. I have studied the fact and I have come to know how the Government apparatus has functioned. Part played by the revenue officials. Saguvali chits were issued to the Harijans. Darkhast rules provided that these lands should not be alienated by the grantees for a period of 15 years, but in collusion with the revenue officials these persons have managed to see that the pohibited period of 15 years be stated as 10 years only. Entries in mutation registers were not changed within a period of six months or so from the date of grant to these Harijans. The matter was kept pending for 12 years. When the sale in favour of the K. K· Sheriff, subsequently to other persons related to Sri Mohammad Ali took place, immediately, thereafter the entries in the mutation registers completed at the lower level.

Party played by the Survey Department : They also lent their helping hands in immediately changing the survey numbers of these lands.

Part played by the police : The Police officials instead of protecting the Harijans, they lent their powerful hands in grabbing the land and the assistance was rendered to the persons to Sheriff and subsequently to other person. This is how the Government is functioning.

Then Sir, calling attention notices were tabled both in this House and the other House. Pursuant to these calling attention notices, Government solemnly made an assurance that the matter would be entered into and the report submitted to the House. The calling attention notice was given by Sri Kagodu Thimmappa and Sri H. T Krishnappa on 11-2-76. Similar calling attention notice was tabled by Sri Kallannavar, M L C. Pursuant to these calling attention notices, the Deputy Commissioner, Bangalore District was directed to make an enquiry and send a detailed report. The Hon'ble Minister assured the House, that the detailed enquiry would be held in this regard and all facts will be placed before this House. The report, according to my information, of the Deputy Commissioner is dated 17-6-77, but this report has not been placed on the table of the House.

All laws, rules and regulations governing this deal have been completely violated. Only to help Mr. Mohammad Ali. Instead of purchasing the land himself, he has purchased the lands in the name of his relatives, who are not entitled to buy any land under the Land Reforms Act and other rules govering the transaction.

Sir, this House had passed a law in 1978 *vide* Act No. 2 of 1979 The Karnataka Scheduled Castes and Scheduled Tribes (Prohibition of Transfer of Certain Lands) Act, 1978. Section 4 of the said act reads thus.

> "4. Prohibition of transfer of granted lands.—Not withstanding anything in any law, agreement, contract or instrument, any transfer of granted land made either before or after the commencement of this Act, in contravention of the terms of the grant of such land or the law providing for such grant, or sub-section (2) shall be null and void and no right, title or interest in such land shall be conveyed or be deemed ever to have conveyed by such transfer"

The entire thing is sham, nominal and illegal and the Government has not taken any action in this behalf though the representations were made to the revenue officials at the District level. My learned friend Mr. Ramakrishna the Hon'ble Minister is sitting very silently in steadied silence. He was the Minister then. Under the constitution, you represent a reserve constituency. I am only telling that you are a Minister now and he was a Minister then.

SRI Y. RAMAKRISHNA.—The had also approached me and had given a representation which I passed on to the then Revenue Minister. I do not know what action he took later.

SRI A. LAKSHMISAGAR.—I shall read sub section (2) of Section 4 of the said Act.

> "(2) No person shall, after the commencement of this Act, transfer or acquire by transfer any granted land without the previous permission of the Government".

This has not been done. Sub Section 3 of Section 4 reads thus.

> "(3) The provisions of sub-sections(1) and (2) shall apply also to the sale of any land in execution of a decree or order of a civil court or of any award or order of any other authority".

This has been completely violated.

More important is, if the Government has really got the interest in the welfare of the Harijans, I want the Government to take action against the guilty persons under Section 8 of the Act which states thus :

> "8. Penalty etc.—(1) Whoever acquires any granted land in contravention of the provisions of sub-section (2) of section 4 shall, on conviction, be punished with imprisonment which may extend to six months or with fine which may extend to two thousand rupees or both.

(2) Notwithstanding anything in the Code of Criminal Procedure 1973, the offence punishable under sub section (1) shall be cognizable."

I want the Government to take action against the cunning wolves immediately if it is really interested in the Harijans to whom the land was granted. I also want the Hon. Minister to place the Report of the Deputy Commissioner on the Table of the House so that fuller and more detailed thought can be given by this House. The following is what the Deputy Commissioner has stated in the last paragraph of his Report.—

"In view of the glaring irregularities noticed, it is necessary that the Government may order for a thorough probe into the above entire episode and take action against all concerned."

MR. SPEAKER.—Is it a certified copy ?

SRI A. LAKSHMISAGR.—This is the information I have and I say this is true, correct and irrefutable. I stand by what I say. I need not mention the source of information.

SRI S. BANGARAPPA.—Please repeat that sentence.

SRI A. LAKSHMISAGAR.—This sentence must be understood in the context of the other irregularities where the son of a senior I.A.S. officer who is holding a responsible position in the Government, has also purchased a land by furnishing false information to the Police Sub-Inspector and so many other people in Bannerghatta.

SRI SHER KHAN.—Sir, I rise to a point of order

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ನನಗೆ ಒಂದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲ. ಆದರೆ, ಮಾನ್ಯ ಲಕ್ಷ್ಮೀಸಾಗರ್ ಅವರ ಬಗ್ಗೆ ನಿಮ್ಮಲ್ಲಿ ಯಾವ ನಿಯಮವಿದ್ದಂತೆ ಕಾಣುವುದಿಲ್ಲ. ಇದು ಸರಿ ಅಲ್ಲ. ನಾನು ಪ್ರಶ್ನೆ ಕೇಳಲು ಎದ್ದು ನಿಂತುಕೊಂಡಾಗ ತಾವು ಏತಕ್ಕೆ ನನ್ನನ್ನು ಕಳ್ಳಿರಿಸುತ್ತೀರಿ ?

ಅಧ್ಯಕ್ಷರು.—ಬೇರೊಬ್ಬರು ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆ ಮೇಲೆ ತಾವು ಮಾತನಾಡಲು ಎದ್ದಾಗ ನಾನದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

SRI AZEEZ SAIT.—Sri, Hon. Member Sri Bhimanna Khandre has remarked to the Chair that the Chair has not given him time. It is highly objectionable and the Hon. Member should withdraw his remarks.

MR. SPEAKER.—I permitted Sri Lakshmisagar and he was raising the mtter. In the meanwhile, another Hon. Member has raised a point of order. I have informed this to Sri Lakshmisagar. I have got equal respect to every Member of this House. Hon. Member

Sri Bhimanna Khandre should not conduct himself in this way. That will not enhance your respect.

SRI SHER KHAN.—Sir, the matter raised by Sri A. Lakshmisagar regarding the offence, is in the absence of the Member concerned. ಮಾನ್ಯ ಸದಸ್ಯರು ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಆದ ವ್ಯವಹಾರವನ್ನು ಹೇಳುತ್ತಿದ್ದಾರೆ. ಅಷ್ಟೇ ಅಲ್ಲದೆ, ಮುಖ್ಯವಾಗಿ, ಈ ಸದನದ ಸದಸ್ಯರಲ್ಲದವರ ಬಗ್ಗೆ ಆರೋಪ ಮಾಡುತ್ತಿದ್ದಾರೆ. ಆದುದರಿಂದ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ತಾವು ದಯವಿಟ್ಟು ಇದರ ಬಗ್ಗೆ ಆದೇಶ ನೀಡಬೇಕೆಂದು ಪ್ರಾರ್ಥಿಸುತ್ತೇನೆ.

SRI AZEEZ SAIT.—Sir, I oppose the point of order. This is a factual case which bears facts and in presenting the case as per the documentary evidence, the names have been mentioned. There is no question that Mr. Lakshmisagar is talking something against some body who is not present in the House to defend himself. The question of defending does not arise here. This is a documentary evidence.

ಶ್ರೀ ಷೇರ್‌ಖಾನ್.—ಮಾನ್ಯ ಅಧ್ಯಕ್ಷರೇ, ನಾನೊಂದು ಕ್ರಿಯಾಲೋಪ ಎತ್ತಿ ತಮ್ಮ ಆದೇಶವನ್ನು ಕಾಯುತ್ತಿರುವಾಗ ಮಾನ್ಯ ಅಜೀಜ್ ಸೇಠ್ ಅವರು ಏತಕ್ಕೆ ಮಧ್ಯೆ ಪ್ರವೇಶ ಮಾಡಬೇಕು ? ಮಾನ್ಯ ಅಜೀಜ್ ಸೇಠ್ ಅವರು ಏನಾದರೂ ಹೇಳಿರುವುದಿದ್ದರೆ ಬೇರೆ ಸಂದರ್ಭದಲ್ಲಿ ಹೇಳಲಿ.

ಅಧ್ಯಕ್ಷರು.—ಮಾನ್ಯ ಲಕ್ಷ್ಮೀಸಾಗರ್ ಅವರು ಡಾಕ್ಯುಮೆಂಟರಿ ಎವಿಡೆನ್ಸನ್ನು ಇಟ್ಟುಕೊಂಡು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಯಾರ ಘನತೆಗೂ ಕುಂದುಂಟಾಗುವ ರೀತಿಯಲ್ಲಿ ಅವರು ನೇರವಾಗಿ ಆರೋಪವನ್ನು ಮಾಡುತ್ತಿಲ್ಲ. ಆದುದರಿಂದ, ಈಗ ತಾವು ಎತ್ತಿರುವ ಕ್ರಿಯಾಲೋಪ ಉದ್ಭವಿಸುವುದಿಲ್ಲ.

SRI A. LAKSHMISAGAR.—Sir, the Hon. Minister wanted me to repeat one sentence. The Deputy Commissioner went into the details that had taken place *i.e.*, irregularities in violation of all laws and rules not only in this case but in other case also the D.C. and in that context says :

> "In view of the glaring irregularities noticed, it is necessary that the Government may order for a thorough probe into the above entire episode and take action against all concerned."

Therefore, it is my demand that this Deputy Commissioner's Report should be placed on the Table of the House during the current session of the Assembly. Thereafter, with your leave, I will raise this matter in one form or the other so that the entire House may know as to how land granted to Harijans is being grabbed by the influential persons contrary to the law. If the Government wants to protect the interests of the Harijans for which all these laws are enacted it is high time that the Government should wake up and give a helping hand in protecting the rights of the Harijans.

ಶ್ರೀ ಕೆ. ಪ್ರಭಾಕರ್.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಮೇಲೆ ನನಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಆಗುವುದಿಲ್ಲ. Sri Bhimanna Khandre also tried to speak on it.

SRI K. PRABHAKAR.—You are not giving me chance. I want only two minutes time which helps the Government to deal with the things.

(INTERRUPTIONS)

SRI AZIZ SAIT.—The Hon. Minister has yielded. How can the Chair go back ?

ಶ್ರೀ ಎಸ್. ಬಂಗಾರಪ್ಪ.— ಕಾನೂನು ಪ್ರಕಾರ, ನಿಯಮಾವಳಿ ಪ್ರಕಾರ ನಾನು ಮಾತನಾಡ ಬೇಕಾದರೂ ಕೂಡ ಅಧ್ಯಕ್ಷರ ಪರವಾನಗಿಯನ್ನು ಪಡೆಯಬೇಕಾಗುತ್ತದೆ.

SRI AZEEZ SAIT.—I quite agree. It is a private understanding between a Minister and Member. The Minister did yield.

SRI S. BANGARAPPA.—It is purely left to the discretion of the Chair. Chair may direct me or you to go ahead or to stop. Chair has got ample powers. ಅದನ್ನು ಏನೂ ಮಾಡುವುದಕ್ಕೆ ಬರುವುದಿಲ್ಲ. ನಾನು ಯೀಲ್ಡ್ ಆದರೂ ಕೂಡ ಅಧ್ಯಕ್ಷರು ಅಪ್ಪಣೆ ಕೊಡಬಹುದು ಇಲ್ಲವೇ ಬಿಡಬಹುದು.

SRI AZEEZ SAIT.—You were good enough to yield for an elderly person. I request you kindly to yield ತಾವು ಎರಡು ನಿಮಿಷ ಯೀಲ್ಡ್ ಆಗಿ ಸ್ವಾಮಿ ?

ಅಧ್ಯಕ್ಷರು.—ದಯಮಾಡಿ ಸ್ವಲ್ಪ ಕೇಳಿ, ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್‌ರವರು ಹಾಗೂ ಪಿ. ರಾಂದೇವ್‌ರವರು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಯವರು ಉತ್ತರ ಕೊಡುತ್ತಾರೆ. ಬೇರೆಯವರಿಗೆ ಸಮಯ ಇಲ್ಲದೇ ಇರುವುದರಿಂದ ನಾನು ರಿಸ್ಟ್ರಿಕ್ಷನ್ ಮಾಡಿದೆ. ಸಮಯದ ಅಭಾವದಿಂದ ಹಾಗೆ ಹೇಳಿದ್ದೇನೆ, ದಯಮಾಡಿ ಕೂತುಕೊಳ್ಳಿ. Unless the Chair calls the name or gives permission the member cannot rise and speak.

ಶ್ರೀ ಅಜೀಜ್ ಸೇಟ್.—ಸ್ವಾಮಿ, ೧೮ ಪರ್ಸೆಂಟ್ ರಿಸರ್ವೇಷನ್ ಪ್ರಕಾರ ಆದರೂ ಅವಕಾಶ ಕೊಡಿ.

ಅಧ್ಯಕ್ಷರು.—ಅದು ನಿಮ್ಮ ಅಭಿಪ್ರಾಯ.

SRI BHEEMANNA KANDRE.—It is highly objectionable. It is not correct on his part.

ಅಧ್ಯಕ್ಷರು.—ನಾನು ಭೀಮಣ್ಣ ಖಂಡ್ರೆಯವರಿಗೂ ಅವಕಾಶಕೊಡಲಿಲ್ಲ. ಮಾನ್ಯ ಸದಸ್ಯರ ಹಕ್ಕನ್ನುಮೊಟಕು ಮಾಡತಕ್ಕಂಥ ಉದ್ದೇಶ ನನಗೆ ಇಲ್ಲ. ದಯಮಾಡಿ ಕೂತುಕೊಳ್ಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮೊದಲು ಮಂತ್ರಿಗಳು ಹೇಳಿಕೆ ಕೊಡಲಿ, ನಂತರ ಮಾನ್ಯ ಸದಸ್ಯರು ಏನಾದರೂ ಕೇಳುವುದಿದ್ದರೆ ಕೇಳಲಿ

ಶ್ರೀ ಪಿ. ರಾಂದೇವ್.—ಮಂತ್ರಿಗಳು ಉತ್ತರ ಕೊಟ್ಟಮೇಲೆ ನಾನು ಪ್ರಶ್ನೆ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಲಕ್ಷ್ಮೀಸಾಗರ್‌ರವರು ಹಾಗೂ ರಾಂದೇವ್‌ರವರು ಏನೊಂದು ವಿಷಯವನ್ನು ನಿಯಮ ೩೧೨ರ ಪ್ರಕಾರ ಪ್ರಸ್ತಾಪ ಮಾಡಿದ್ದಾರೆ ಈ ವಿಷಯ ಗಹನವಾದುದು ಹಾಗೂ ಪ್ರಾಮುಖ್ಯವಾದುದು. ನಮ್ಮ ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರುವಂಥ ಹರಿಜನ ಮತ್ತು ಗಿರಿಜನರಿಗೆ ಸರ್ಕಾರದವರು ಕೊಟ್ಟಿರುವಂತ ಆಸ್ತಿಯನ್ನು ಅಂದರೆ ಜಮೀನನ್ನು ಲೂಟಿ ಹೊಡೆಯುವುದಕ್ಕೆ ಯಾರು ಯಾರು ಸಂಚು ಹೂಡಿದ್ದಾರೆ ಎನ್ನತಕ್ಕ ವಿಷಯದ ಮೇಲೆ ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅಧ್ಯಕ್ಷರೇ, ಈ ವಿಚಾರ ದಿನಾಂಕ : ೧೫–೨–೧೯೭೬ರಲ್ಲಿ ಕೂಡ ಪ್ರಸ್ತಾಪಕ್ಕೆ ಬಂದಿದೆ. ಈ ವಿಚಾರದಲ್ಲಿ ಆಗಿದ್ದಂತ ಕಂದಾಯ ಮಂತ್ರಿಯವರು ಗಮನ ಸೆಳೆಯುವ ಸೂಚನೆ ಮೇರೆಗೆ ಹೇಳಿಕೆ ಕೂಡ ಕೊಟ್ಟಿದ್ದಾರೆ. ಅನಂತರ ಮೇಲ್ಮನೆಯಲ್ಲಿ ಮಾನ್ಯ ಸದಸ್ಯರಾಗಿದ್ದಂತ ಶ್ರೀಮಾನ್ ಕಲ್ಲಣ್ಣನವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಕ್ಕೆ ಸರ್ಕಾರದ ಪರವಾಗಿ ಉತ್ತರ ಕೊಟ್ಟಿದ್ದಾರೆ. ಸಮಾಜದಲ್ಲಿ ದುರ್ಬಲವರ್ಗವಾಗಿರುವಂಥ ಹರಿಜನ ಮತ್ತು ಗಿರಿಜನರಿಗೆ ಪುಕ್ಕಟೆಯಾಗಿ ಭೂಮಿಯನ್ನು ಕೊಡುವ ಆ ಕಾನೂನನ್ನು ಎಲ್ಲರೂ ಸ್ವಾಗತ ಮಾಡಿದ್ದೇವೆ. ಹರಿಜನರ ಬಗ್ಗೆ ಪದೇ ಪದೇ ವಿಚಾರ ಮಾಡುತ್ತಿದ್ದೇವೆ. ಭೂಮಿ ಇರಬಹುದು, ಮತ್ತೊಂದು ಇರಬಹುದು, ಇಂಥ ಸವಲತ್ತುಗಳನ್ನು ಹರಿಜನರಿಂದ ಲೂಟಿ ಹೊಡೆಯತಕ್ಕಂಥ ಮತ್ತೊಂದು ವರ್ಗ ಸಮಾಜದಲ್ಲಿ ಏನಿದೆ ಈ ವರ್ಗದ ಜನರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮೀಸಾಗರ್‌ರವರು ಏನು ಹೇಳಿದ್ದಾರೆ. ಇದನ್ನು ನಾನೂ ಸಂಪೂರ್ಣವಾಗಿ ಒಪ್ಪುತ್ತೇನೆ. ಇಂಥ ಒಂದುವರ್ಗ ಸಮಾಜದಲ್ಲಿ ಬಹಳ ವರ್ಷಗಳಿಂದಲೂ ಇದೆ. ಇದನ್ನು ನಾವು ಯಾವಾಗಲೂ ನೋಡುತ್ತಿದ್ದೇವೆ. ಕಾನೂನನ್ನು ಮಾಡತಕ್ಕ ಕಾಲದಲ್ಲಿ, ಕಾನೂನನ್ನು ಜಾರಿಗೆ ಕೊಡತಕ್ಕ ಕಾಲದಲ್ಲಿ ಸರ್ಕಾರ ಎಚ್ಚರಿಕೆಯಿಂದ ಇರಬೇಕೆಂಬುದು ಒಂದು, ಅದೇ ರೀತಿ ಸಾರ್ವಜನಿಕರ ಸಹಕಾರ ಕೂಡ ಇರಬೇಕೆಂಬುದನ್ನು ಯಾರು ಕೂಡ ಮರೆಯಬಾರದು. ಅನೇಕ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಅರ್ಜಿಗಳ ಮೂಲಕ, ಟೆಲಿಫೋನ್‌ಗಳ ಮೂಲಕ, ಮಂತ್ರಿಗಳಿಗೆ ಇಲ್ಲವೇ ಅಧಿಕಾರಿಗಳಿಗೆ ನೇರವಾಗಿ ವಿಷಯಗಳನ್ನು ತಿಳಿಸತಕ್ಕಂಥ ಪರಿಪಾಠ ಇವತ್ತು ನಮ್ಮ ಸಮಾಜದಲ್ಲಿದೆ. ಹಲವಾರು ವರ್ಷಗಳಿಂದ ಈ ಪದ್ಧತಿ ನಮ್ಮಲ್ಲಿದೆ. ಇದರಿಂದ ಕೆಲವು ಪ್ರಕರಣಗಳಿಗೆ ಸಂಬಂಧಪಟ್ಟಂತ ನೇರವಾದ ಕ್ರಮತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ದುರ್ಬಲವರ್ಗಗಳಿಗೆ ಸಂಬಂಧಪಟ್ಟಂತೆ ವಿಷಯದಲ್ಲಿ ಹಾಗೂ ಹರಿಜನರಿಗೆ ಸಂಬಂಧಪಟ್ಟಂತ ವಿಷಯದಲ್ಲಿ ಸರ್ಕಾರಕ್ಕೆ ಸಂಪೂರ್ಣವಾದಂತ ಕಳಕಳಿ ಇದೆ. ಸ್ವಾತಂತ್ರ್ಯಾನಂತರ ಈ ಒಂದು ವರ್ಗಗಳ ಬಗ್ಗೆ ಪದೇ ಪದೇ ಹೇಳುತ್ತಿದ್ದೇವೆ. ಈ ಒಂದು ವರ್ಗದಲ್ಲಿರತಕ್ಕ ಮನೋದೌರ್ಬಲ್ಯ, ಮಾನಸಿಕ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು ಸರ್ಕಾರದವರು ಕೊಟ್ಟಿರತಕ್ಕ ಭೂಮಿಯನ್ನು ಬೇರೆಯವರು ಕಸಿದುಕೊಳ್ಳುವುದು ನಡೆಯುತ್ತಿದೆ. ಈ ವರ್ಗದಲ್ಲಿರತಕ್ಕ ಜನಕ್ಕೆ ೧೦೦ ರೂಪಾಯಿ ಕರೆನ್ಸಿ ನೋಟ್ ಕೊಟ್ಟರೆ, ಭೂಮಿ ಹೋದರೂ ಅಡ್ಡಿಯಿಲ್ಲ ಹಣ ಬಂತಲ್ಲ ಎಂದು ಸಂತೋಷಪಡುತ್ತಾರೆ. ಈ ಒಂದು ವರ್ಗದಲ್ಲಿ ರಾಜಕೀಯ ಪ್ರಜ್ಞೆ ಇಲ್ಲ, ಹೆಕ್ಕಿನ ಪ್ರಜ್ಞೆ ಇಲ್ಲ, ಯಾವ ಮಟ್ಟದಲ್ಲಿ ಪ್ರಜಾಪ್ರಭುತ್ವ ಎನ್ನುವ ಹೆಸರು ಇರಬೇಕಾಗಿತ್ತು ಆ ಮಟ್ಟಕ್ಕೆ ನಾವಿನ್ನೂ ಬಂದಿಲ್ಲ. ಈ ಒಂದು ವರ್ಗಕ್ಕೆ ಹಕ್ಕುಗಳು ಇದ್ದರೂ ಕೂಡ, ಸರ್ಕಾರದ ಕಾನೂನು ಇದ್ದರೂ ಕೂಡಾ ಸಂಪೂರ್ಣವಾಗಿ ದುರುಪಯೋಗಮಾಡತಕ್ಕಂಥ ಕೆಲವು ರೆಬೇಷಿಯಸ್ ಕನ್ನಿಂಗ್ ವೂಲ್ಫ್‌ಸ ಅಂತ ಏನು ಕರೆಯಬಹುತ್ತೇವೆ. ಇಂಥ ಒಂದು ವರ್ಗ ನಮ್ಮ ಸಮಾಜದಲ್ಲಿ ಇದೆ. ಇವತ್ತು ಮಾನ್ಯ ಲಕ್ಷ್ಮೀಸಾಗರ್‌ರವರನ್ನ ಕಾನೂನು ಪಂಡಿತರು ಎನ್ನುವ ಒಂದೇ ದೃಷ್ಟಿಯಿಂದಲ್ಲ, ಇಂಥ ವಿಚಾರದಲ್ಲಿ ಬೆಳಕನ್ನು ಚೆಲ್ಲತಕ್ಕಂಥ ಪ್ರಯತ್ನ ಮಾಡಿದ್ದಕ್ಕೆ ಅವರನ್ನು ನಾನೂ ಅಭಿನಂದಿಸುತ್ತೇನೆ ೧೫–೨–೭೯ರಲ್ಲಿ ನಾವು ಕಾನೂನನ್ನು ಮಾಡಿದ್ದೇವೆ. ಸರ್ಕಾರದವರು ಕೊಟ್ಟಂಥ, ಹರಿಜನರಿಗೆ ಸಂಬಂಧಪಟ್ಟ ಭೂಮಿಯಂನ್ನು ಅದು ಯಾವುದೇ ಭೂಮಿಯಾಗಿರಲಿ ಪರಭಾರೆ ಮಾಡುವಂಥಾದ್ದು ಕಾನೂನುಬಾಹಿರ, ಅಂಥವರಿಗೆ ಶಿಕ್ಷೆಯಾಗುತ್ತದೆಂಬ ವಿಷಯವನ್ನು ಕಾನೂನಲ್ಲಿ ಮಾಡಿದ್ದೇವೆ. ಆದರೂ ಈಗ ನಡೆದಿರತಕ್ಕ ಅವ್ಯವಹಾರಗಳ ಕಾನೂನನ್ನು ಮಂರಿಯಲಾಗಿದೆ. ಈ ವಿಷಯದಲ್ಲಿ ಮಾನ್ಯ ಪ್ರಭಾಕರ್‌ರವರು, ಭೀಮಣ್ಣ ಖಂಡ್ರೆಯವರು ಕೂಡ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಮುಂದೆ ಕಂದಾಯ ಇಲಾಖೆಯ ಬೇಡಿಕೆ ಬರುತ್ತೆ, ಆಗ ಇನ್ನೂ ಹೆಚ್ಚಿನ ವಿವರಗಳನ್ನು ತಿಳಿಸಿರುವುದಕ್ಕೆ ಪ್ರಯತ್ನ ಮಾಡಿ. ಅಲ್ಲದೆ ಸರ್ಕಾರಕ್ಕೆ ಕೂಡ ಯಾವ ವಿಷಯವನ್ನೂ ಮುಚ್ಚಿಡಬೇಕೆನ್ನುವ ಉದ್ದೇಶ ಇಲ್ಲ. ಜೊತೆಗೆ ಯಾರಿಗೂ ರಕ್ಷಣೆ ಕೊಡಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ, ಇದರ ಬಗ್ಗೆ ಯಾರಿಗೂ ಅನುಮಾನ ಬೇಕಿಲ್ಲ.

ಅಧ್ಯಕ್ಷರೇ, ಹಿಂದೆ ರೆವಿನ್ಯೂ ಸಚಿವರಾಗಿದ್ದ ಮಾನ್ಯ ಹುಚ್ಚಮಾಸ್ತಿಗೌಡರು ಕೊಟ್ಟಿದಂತಹ ಹೇಳಿಕೆಯನ್ನು ನೋಡಿದರೆ ಅವರು ಸಹ ಇದೇ ಮಾತನ್ನು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ಅವರು ಏನು ಕೇಳುತ್ತಿದ್ದಾರೆ, ಅದು ಸ್ಪಷ್ಟವಾಗಿ ಕೇಳತಕ್ಕ ಪ್ರಶ್ನೆ ಹೌದು. ಅದು ರೆಫ್ಯೂಸ್ ಮಾಡುವಂತಾದ್ದಲ್ಲ. ಅದನ್ನು ಸರ್ಕಾರ ಸ್ವಾಗತ ಮಾಡುತ್ತದೆ. ಈಗ ನಾನು ಒಂದು ಹೇಳಿಕೆಯನ್ನು ತಯಾರು ಮಾಡಿ ಇಟ್ಟಿದ್ದೇನೆ. ಈ ವಿಚಾರದಲ್ಲಿ ಸ್ಪೆಷಲ್ ಡೆಪ್ಯುಟಿ ಕಮಿಷನರ್ ಅವರಿಂದ ಸರ್ಕಾರಕ್ಕೆ ಏನು ವರದಿ ಬಂದಿದೆ, ಅದನ್ನು ಈ ಸದನದಲ್ಲಿ ಇಡಬೇಕೆಂಬ ಎನ್ನುವುದೇ ತಮ್ಮ ಒತ್ತಾಯವಾಗಿದೆ. ಈಗ ನಾನು ಒಂದು ಹೇಳಿಕೆಯನ್ನು ಕೊಡುತ್ತಿದ್ದೇನೆ. ಈ ಹೇಳಿಕೆಯಲ್ಲಿ ಎಲ್ಲ ವಿವರಗಳೂ ಇದೆ ಎಂದು ನಾನು ಹೇಳಲಾರೆ. ಏಕೆಂದರೆ ಗಮನ ಸೆಳೆಯುವ ಸೂಚನೆ ಮುಂತಾದ್ದು ಆಗಿದ್ದರೆ ಸಂಪೂರ್ಣ ವಿಚಾರ ಬರುತಿತ್ತು. ಈಗ ತಾವು ರೂಲ್ 340ರ ಪ್ರಕಾರ ಈ ವಿಷಯ ತಂದಿರತಕ್ಕದರ ಬಗ್ಗೆ ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ಓದುತ್ತಿದ್ದೇನೆ. ಇದೇ ಸಂಪೂರ್ಣ ವರದಿ ಅಂತ ನಾನು ಈಗ ಹೇಳುವುದಿಲ್ಲ. ಏಕೆಂದರೆ ಬೇರೆ ವಿಷಯಗಳನ್ನು ಸಹ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈಗ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಇದನ್ನು ಓದುತ್ತಿದ್ದೇನೆ.

The marginally noted 16 persons belonging to Scheduled Castes were granted 32 acres of land at 2 acres each in Sy. No. 7 of Bilwardahalli village in Anekal Taluk under the depressed Class Darkaast Rules, free of cost, vide Tahsildars Orders B. D. No. 78/55-56, dated 25-5-56. As per the above rules then in force, the grantees had no power to alienate the lands for a period of 15 years. However during the period from 1-6-67 to 13-11-68 the above grantees alienated all the 32 acres of granted land by way of sale under six seprate registered transactions. One K. K. Sheriff purchased the above lands to an extent of

1. Papayya Munishama
2. Murishama Puttappa
3. Puttappa Muniappa
4. Tayappa Puttappa
5. Muniappa Tayappa
6. Muniappa Muniappa
7. Bille Pillappa Macappa
8. Dekhappa Muniappa
9. Muniyellappa
10. Ajjappa Puttappa
11. Munirangappa Mallappa
12. Muniappa Munishamappa
13. Gurappa Muniappa
14. Gullappa Nanjappa
15. Gupalappa Muniveerappa
16. Venkatappa Muniappa

26 acres in his name and 6 acres on behalf of his daughter Smt. Jabeen Sultana Begum as her guardian, for a total amount of Rs. 5 500. These transactions were between the above parties, and we have no information of any assistance of revenue and police authorities in these transactions, so far as execution of sale deed is concerned. Subsequently, during 1970 and 1971, Sri K. K. Sheriff sold 23 acres 37 guntas out of the above 32 acres during the period from 2-10-65 to 31-12-75 to the following persons through registered sale deeds: -

i) 5-00 acres in favour of Smt. Waheedunnisa Begum, wife of Sri Mohammed Ali for Rs. 2,000

ii) 9-16 acres in favour of Smt. Habeebunnisa Begum, believed to be the Sister in law of Sri Mohammed Ali for Rs. 5,000

iii) 9-21 acres in favour of Smt. Waheedunnisa Begum, wife of Sri Mohammod Ali for Rs. 4,000.

In the course of preliminary enqui y and on an examination of the concerned records, it was seen that the Depressed Classes Darkhast Rules than in force prohibited the alienation of these lands for a period of 15 years. *Prima facie*, therefore, these transactions appeared to be in violation of the above rules It m y also be mentioned here that these alienations appear to contravene the provisions of the Karnataka Scheduled Castes and Scheduled Tribes (Prohibition of Transfer of Certain Lands) Act 1978 which came into force on 1-1-1979, and the above transfers of 32 acres of granted land would become null and void.

This matter had also been raised in this House earlier through Call Attention Notices and the then-Minister for Revenue had made a Statement on 8-3-1976. In pursuance thereof, the matter was further got enquired into and the Deputy Commissioner, Bangalore, was directed on 20-12-76 to make a detailed enquiry into each transaction and take action as per provisions of Law. It is reported that notices have been issued on 21-3-78 to the concerned parties asking to them sh wcause why action should not be taken to resume the lands in question to Government for violation of the Land Grant Rules. Notices have been served and the cases are in the hearing stage. The Special Deputy Commissioner, Bangalore, is being instructed to finalise these cases without further delay. ಅಧ್ಯಕ್ಷರೇ, ಇದು ನಾನು ಕೊಟ್ಟಿರುವ ಹೇಳಿಕೆ. ಜೊತೆಗೆ ಸ್ಪೆಷಲ್ ಡೆಪ್ಯುಟಿ ಕಮಿಷನರ್ ಅವರು ಇದರ ಬಗ್ಗೆ ಆಳವಾಗಿ ವಿಚಾರ ಮಾಡಿದ್ದಾರೆ. ಅವರಿಗೆ ನಾನು ಅಭಿನಂದನೆ ಸಲ್ಲಿಸಬೇಕಾಗಿದೆ. ನಾನೂ ಸಹ ಅವರ ರಿಪೋರ್ಟನ್ನು ದೀರ್ಘವಾಗಿ ಓದಿದ್ದೇನೆ. ಸುಮಾರಾಗಿ ಎಲ್ಲಾ ವಿಷಯವನ್ನು ಎಕ್ಸಾಸ್ಟೀವ್ ಆಗಿ ನೋಡಿದ್ದಾರೆ. ಅದನ್ನು ಮುಚ್ಚಿಡಬೇಕೆಂಬುದು ಸರ್ಕಾರದ ಉದ್ದೇಶ ಅಲ್ಲ. ಆ ವರದಿಯನ್ನು ಈ ಸದನದಲ್ಲಿ ಇಡಬೇಕೆಂಬ ಬೇಡಿಕೆ ಇದೆ. ಆ ವರದಿಯನ್ನು ಈ ಸಭೆಯಲ್ಲಿ ಇಡುತ್ತೇವೆ. ಆ ವರದಿಯನ್ನು ತಾವೆಲ್ಲರೂ ಕೂಡ ನೋಡಬೇಕು. ಸರ್ಕಾರಕ್ಕೂ ಕೂಡ ಅಷ್ಟೇ ಆಸಕ್ತಿ ಇದೆ. ಇದರಲ್ಲಿ ಶ್ರೀ ಮಹಮ್ಮದಾಲಿ ಹಾಗೂ ಮತ್ತೊಬ್ಬರು ಇದ್ದಾರೆಂಬುದು ನಮಗೆ ಅನಾವಶ್ಯಕ. ಈ ಪೆನಾಲ್ಟಿ ಕ್ಲಾಸ್ ಏನು ಹೇಳಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಇರಲಿ, ನಂತರ ಆ ಭೂಮಿಯನ್ನು ರಿಸ್ಯೂಮ್ ಮಾಡಿಕೊಳ್ಳುವುದು ಇರಲಿ, ಒಟ್ಟಿನಲ್ಲಿ ಆ ಬಗ್ಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಷೋಕಾಸ್ ನೋಟೀಸ್ ಕೊಟ್ಟಿದ್ದಾಗಿದೆ. ಕ್ರಮ ತೆಗೆದುಕೊಂಡಿದ್ದಾರೆ. ಇನ್ನು ಮುಂದೆ ಇದಕ್ಕೆ ಸಂಬಂಧಪಟ್ಟ ವರದಿಯನ್ನು ಇಡುತ್ತೇವೆ. ಈ ಸದನದಲ್ಲಿ ತಾವೆಲ್ಲರೂ ಚರ್ಚೆ ಮಾಡಿ ತಮ್ಮ ಅಭಿಪ್ರಾಯಗಳನ್ನು ಕೊಡಿ. ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತದೆ ಎಂದು ಹೇಳುತ್ತೇನೆ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಹೇಳಿಕೆಯನ್ನು ನೋಡಿದ ಮೇಲೆ ಅವರಿಗೆ ಒಹಳ ಕಳಕಳಿ ಇದೆ ಅಂತ ಅನಿಸುತ್ತಿದೆ. ಆದರೆ ಈ ಉತ್ತರದಲ್ಲಿ ನೋಡಿದರೆ ಅವರು ಏನೇ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿಲ್ಲ ಅಂತ ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಆದರ ರಿಪೋರ್ಟ್ ಸಹ ಸಭೆಯ ಮುಂದೆ ಇಡುತ್ತಿದ್ದೇನೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ಮಹಮದಾಲಿ ಅಂತ ಹೆಸರು ಮಾತ್ರ ಹೇಳಿದಿರಿ. ಇವರು ಯಾರು ಅಂತ ಏತಕ್ಕೆ ಹೇಳುತ್ತಿಲ್ಲ. ಈ ರೀತಿ ಆದರೆ ದಾಕ್ಷಿಣ್ಯಕ್ಕೆ ಮುಖ ನೋಡಿ ಹೇಳಿಕೆ ಕೊಟ್ಟಂತೆ ಆಗುತ್ತದೆ. ಸರ್ಕಾರಕ್ಕೆ ಪ್ರಾಮಾಣಿಕತೆ ಇದ್ದರೆ ಇದುವರೆಗೂ ಸುಮ್ಮನೆ ಏತಕ್ಕೆ ಇದ್ದೀರಿ. ಈ ಬಗೆ ತಾರೀಖು ೮-೩-೧೯೭೬ ರಂದು ಈ ಮನೆಯಲ್ಲಿ ಮಾತ್ತು ಮೇಲ್ಮನೆಯಲ್ಲಿ ಉತ್ತರ ಕೊಟ್ಟಿದ್ದಾರೆ. ಈಗ ೧೯೮೦ ರಲ್ಲಿ ಇದ್ದೇವೆ. ನಾಲ್ಕು ವರ್ಷ ಕಾಲ ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಸುಮ್ಮನೆ ಕುಳಿತಿರುವುದು ಏತಕ್ಕೆ ?

ಅವರಿಗೆ ಒಂದು ನೋಟೀಸನ್ನು ಕೊಟ್ಟರಬಹುದು ಅಷ್ಟೇ. ಆದರೆ ಯಾವ ರೀತಿ ಕ್ರಮ ತೆಗೆದುಕೊಂಡಿದ್ದೀರಿ ? ಕಾನೂನಿಗೆ ತಿದ್ದುಪಡಿ ಆದ ತಕ್ಷಣ ನೆಲವನ್ನು ವಾಪಸ್ ಅವರು ಕೊಡಲಿಲ್ಲವೆ ? ಏಕೆ ಇಲ್ಲಿ ಕೈಕಟ್ಟಿಕೊಂಡು ಕುಳಿತಿದ್ದೀರಿ ?

ಇನ್ನು ಎರಡನೆಯದಾಗಿ, ಸರ್ಕಾರ ಈ ಬಗ್ಗೆ ಏಕೆ ಇಷ್ಟು ನಿಧಾನವಾಗಿದೆ. ೧೯೫೬ರಲ್ಲಿ ಹರಿಜನರಿಗೆ ಕೊಟ್ಟ ಜಾಗವನ್ನು ೧೯೬೭ರಲ್ಲಿ ಪರಭಾರೆ ಮಾಡಿದ್ದಾರೆ. ಇಲ್ಲಿಗೆ ೧೩ ವರ್ಷಗಳಾದವು ೧೯೬೭ರಲ್ಲಿ ಇದು ಸದನದ ಮುಂದೆ ಬಂದಿತು. ರೆವಿನ್ಯೂ ಇಲಾಖೆಯವರು ಹೇಗೆ ಅದನ್ನು ರಿಜಿಸ್ಟರ್ ಮಾಡಿಕೊಂಡರು ? ಇದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ. ಅವರನ್ನು ಸಸ್ಪೆಂಡ್ ಮಾಡಲಾಗಿದೆಯೇ ಹೇಗೆ ? The intention of the Government is not sincere and honest. ಈ ತೋಳಗಳ ಜೊತೆ ಅವರೂ ಕೂಡ ಶಾಮೀಲಾಗಿದ್ದಾರೆ.

> "In pursuance thereof, the Matter was further got enquired into and the Deputy Commissioner, Bangalore, was directed on 20-12-1976 to make a detailed enquiry into each transaction and take action as per provisions of Law. It is reported that notices have been issued on 21-3-1980 to the concerned parties asking them to showcause why action shold not be taken to resume the lands in question to Government for violation of the Land Grant Rules."

ಈ ಬಗ್ಗೆ ನಿಮ್ಮ ಕಾನೂನು ಯಾವಾಗ ಬಂತು ? ೧೦-೧೯೭೯ರಲ್ಲಿ Prohibition of Transfer of certion amount to SCs and STs. ಈ ಬಗ್ಗೆ ಕಾನೂನು ಅಸ್ತಿತ್ವದಲ್ಲಿ ಬಂದಿದ್ದರೂ ಈಗ ಜುಲೈ ೧೯೮೦ ಆಗಿದೆ. ಇದುವರೆಗೂ ಈ ಬಗ್ಗೆ ನೋಟೀಸನ್ನು ಇಷ್ಟೂ ಮಾಡಿ ಸುಮ್ಮನೆ ಕುಳಿತಿದ್ದೀರಿ. ಆ ಬಗ್ಗೆ ಕಳಕಳಿ, ಕಾಳಜಿ ಮತ್ತು ಅವುಗಳ ಹಿನ್ನೆಲೆಯಲ್ಲಿ ಪ್ರಾಮಾಣಿಕತೆ ಇದ್ದರೆ ದಯವಿಟ್ಟು ಮಾಡಿರುವ ಅಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಿ. ಈ ಬಗ್ಗೆ ಯಾರು ಭೂಮಿಯನ್ನು ಕಳೆದುಕೊಂಡಿದ್ದಾರೆ ಅವರಿಗೆ ಇನ್ನೂ ಒಂದು ತಿಂಗಳಲ್ಲಿ ಅವರು ಭೂಮಿಯನ್ನು ಪಾಪಸ್ಸು ಪಡೆದುಕೊಳ್ಳುವಂತಹ ಕಾನೂನು ಮಾಡಿ. ಮೂರನೆಯದಾಗಿ ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರೆಂದು ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ಅವರು ಕೇಳಿದ್ದಾರೆ. ಆದಕಾರಣ ತಾವು ಏನು ಕ್ರಮವನ್ನು ಆ ಬಗ್ಗೆ ತೆಗೆದುಕೊಳ್ಳುತ್ತೀರೆಂಬುದನ್ನು ಈ ಸದನಕ್ಕೆ ತಿಳಿಸತಕ್ಕದ್ದು. ಮತ್ತು ಅವರಿಗೆ ಪ್ರಾವಿಷನ್ಸ್ ಪ್ರಕಾರ ಪನಿಷ್‌ಮೆಂಟ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ಶ್ರೀ ರಾಮದೇವ್ ಅವರು ಈ ಬಗ್ಗೆ ೩-೪ ಪ್ರಶ್ನೆಗಳನ್ನು ಎತ್ತಿದ್ದಾರೆ. ಮಹಮದಾಲಿ ಎಂಬುವರು ಯಾರು, ಇದನ್ನು ಏಕೆ ಮುಚ್ಚಿಡುತ್ತೀರಿ ಎಂದು ಕೇಳಿದರು. ಇದರಲ್ಲಿ

(ಶ್ರೀ ಎಚ್. ಡಿ. ಕೃಷ್ಣಪ್ಪನವರು ಆಧ್ಯಕ್ಷ ಪೀಠವನ್ನಲಂಕರಿಸಿದರು)

ಮುಚ್ಚಿಡಬೇಕಾದಂತಹ ವಿಷಯವೇನೂ ಇಲ್ಲ. ಈ ಬಗ್ಗೆ ನಾನು ಸಭೆಯ ಮುಂದೆ ವರದಿಯನ್ನು ಇಡುತ್ತೇನೆಂದು ಹೇಳಿದ್ದೇನೆ. ವರದಿಯಲ್ಲಿ ಮಾಜಿ ಮಂತ್ರಿಯಾದ ಮಹಮದಾಲಿಯವರು ಎಂದೇನೂ ಇಲ್ಲ. ಇಲ್ಲಿ ಬರೀ ಮಹಮದಾಲಿ ಎಂದು ಆಚ್ಚಾಗಿದೆ. ಅದನ್ನೇ ನಾನು ಹೇಳುತ್ತಿದ್ದೇನೆ.

SRI A. LAKSHMISAGAR.—You did not contradict when I said 'Minister'. It is enough.

ಶ್ರೀ ಎಸ್. ಬಂಗಾರಪ್ಪ.—ಮಾಹಿತಿಯಲ್ಲಿ ಮಾಜಿ ಮಂತ್ರಿಗಳು ಎಂದು ಆಚ್ಚಾಗಿಲ್ಲ. ಮಾಜಿ ಮಂತ್ರಿಗಳೇ ಆವರು ಎಂಬುದು ಈಗ ತಿಳಿದು ಬಂದಿದೆ. ವರದಿಯಲ್ಲಿ ಬಂದಿದ್ದನ್ನು ನಾನು ಹೇಳಿದೆ. ಅದನ್ನು ಮುಚ್ಚಿಡಬೇಕೆಂಬುದು ನಮ್ಮ ಉದ್ದೇಶವಲ್ಲ. ನಾವು ಆ ವರ್ಗಕ್ಕೆ ಸೇರಿದವರಲ್ಲ. ನಿಮಗೆ ಇದರಲ್ಲಿ ಯಾವ ಅನುಮಾನವೂ ಬೇಡ. ಮಾಹಿತಿಯಲ್ಲಿ ಇದ್ದುದನ್ನು ನಾನು ಹೇಳಿದ್ದೇನೆ. ಹೇಗಿದ್ದರೂ ಈ ಬಗ್ಗೆ ನಾನು ಸದನದ ಮುಂದೆ ವರದಿಯನ್ನು ಇಡುತ್ತೇನಲ್ಲ. ಇನ್ನು ೧೯೭೬ರಿಂದೀಚೆಗೆ ಏಕೆ ಕ್ರಮ ತೆಗೆದುಕೊಂಡಿಲ್ಲವೆಂದು ಕೇಳಿದ್ದೀರಿ. ಅದಕ್ಕೆ so many reasons; some times no reasons. For some time some reasons; for some period no reasons. With some reasons and without reasons. ತಮಗೆ ಈ ಬಗ್ಗೆ ಎಷ್ಟು ಆತಂಕ ಇದೆಯೋ ಅಷ್ಟೇ ಆತಂಕ ನಮಗೂ ಸಹಾ ಇದೆ. ಇದರ ಬಗ್ಗೆ ಕಡತವನ್ನು ನೋಡುತ್ತಿದ್ದರೆ ಕಾರಣ ವಿದ್ದೂ ಅಥವಾ ಇಲ್ಲದೆಯೋ ಇದರಲ್ಲಿ ನಿಧಾನವಾಗಿದೆಯೆಂದು ಗೊತ್ತಾಗುತ್ತದೆ. ಇದರಲ್ಲಿ ನಾವು ಯಾರ ಮುಖ ಮುಸುಡಿಯನ್ನು ನೋಡುವುದಕ್ಕೆ ಹೋಗುವುದಿಲ್ಲ. ಅವರು ಯಾರೇ ಇರಬಹುದು, ಎಷ್ಟೇ ದೊಡ್ಡವರಿರಬಹುದು, ಕಾನೂನಿನ ಮುಂದೆ ಎಲ್ಲರೂ ಸಹಾ ಒಂದೇ. ಆದಕಾರಣ ಯಾವ ರೀತಿಯ ಟ್ರೀಟ್‌ಮೆಂಟ್ ಕೊಡುವುದಕ್ಕೂ ನಾನು ಸಿದ್ಧನಾಗಿದ್ದೇನೆ. ಈ ವಿಷಯದ ಬಗ್ಗೆ ನಾನು ಮುಂದೆ ವರದಿಯನ್ನು ಇಟ್ಟಾಗ ಚರ್ಚೆ ಆಗಲಿ, ಆ ಬಗ್ಗೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಅವಕಾಶವಿದೆ. ಇಂತಹವರ ಮೇಲೆ ನಾವು ಕ್ರಮ ಕೈಗೊಂಡರೆ ಹರಿಜನರು ಕೊನೇಪಕ್ಷ ಉಳಿದಾರು. ಇಲ್ಲದಿದ್ದರೆ ತೀರೇ ಹೋಗುತ್ತಾರೆ. ಶತಶತಮಾನಗಳಿಂದ ಇವರನ್ನು ತುಳಿದುಕೊಂಡು ಬಂದಿದ್ದಾರೆ. ಇಂತಹವರು ಬದುಕಬೇಕಾದರೆ ಇವೆಲ್ಲವನ್ನೂ ನಾವು ಮಾಡಬೇಕಾಗುತ್ತದೆ. ಇದರಲ್ಲಿ ಬೇರೆ ಅಭಿಪ್ರಾಯ ಒರುವುದಕ್ಕೆ ಕಾರಣವಿಲ್ಲ. ರಿಜಿಸ್ಟ್ರೇಷನ್ ಹೇಗೆ ಮಾಡಿಕೊಂಡರು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಕಾನೂನು ಪ್ರಕಾರ ರಿಜಿಸ್ಟರ್ ಮಾಡಿಕೊಳ್ಳಬೇಕಾಗುತ್ತದೆ. ರಿಜೆಕ್ಟ್ ಮಾಡುವುದಕ್ಕೆ ಬರುವುದಿಲ್ಲ. ಇದು ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಚೆನ್ನಾಗಿ ಗೊತ್ತಿದೆ. ಇವರು ಮಂತ್ರಿಗಳೇ, ಇವರು ಮಾಜಿ ಮಂತ್ರಿಗಳೇ ಎಂದು ನೋಡಿ ಯಾರೂ ರಿಜಿಸ್ಟರ್ ಮಾಡಲು ಹೋಗುವುದಿಲ್ಲ. ಆದುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇನ್ನು ರೆವಿನ್ಯೂ ಅಧಿಕಾರಿಗಳ ಮತ್ತು ಪೋಲೀಸ್ ಅಧಿಕಾರಿಗಳ ಆಕ್ಟೀವ್ ಸಪೋರ್ಟ್ ಇದರಲ್ಲಿ ಇದೆಯೆಂದು ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದ್ದಾರೆ. ಇದರ ಬಗ್ಗೆ ವಿಚಾರ ಮಾಡೋಣ. ಆದರೆ ಬರವಣಿಗೆಯಲ್ಲಿ ಇಲ್ಲಿ ಏನೂ ಇಲ್ಲ.

SRI A LAKSHMISAGAR —Complaints have been lodged with the police and it has been brought to the notice of the police. But they have not helped them- Similarly it has been brought to the notice of revenue officials at the Tahsildar's level and not beyond that. Of course, there are other legal proceedings in which comments have been made. But they are not strictly matters which come within the purview of this matter. But action should be taken and a warning should be given to the Revenue officials that when they deal with this matter they must be careful and build-up records properly.

ಶ್ರೀ ಎಸ್. ಬಂಗಾರಪ್ಪ.—ಆದುದರಿಂದ, ಇದರಲ್ಲಿ ರವಿನ್ಯೂ ಇಲಾಖೆಯ ಅಧಿಕಾರಿಗಳು ಇರಬಹುದೇನೋ. ಅದರ ಬಗ್ಗೆ ವಿಚಾರಣೆ ಮಾಡಿ ಸದನದ ಮುಂದೆ ವರದಿ ಇಡುವುದಕ್ಕೆ ಸಿದ್ಧನಾಗಿದ್ದೇನೆ. ವರದಿಯನ್ನು ಇಟ್ಟಾಗ ಮತ್ತು ಚರ್ಚೆಗೆ ಬಂದಾಗ ಮಾನ್ಯ ಸದಸ್ಯರು ಆಲೋಚಿಸಬಹುದು. Hon'ble Member Sri Ramdev said the intention of the Government is not clear. The intention of the Government, at least in the present Government, is very very clear. I think I have made him very clear so far as Government intentions are concerned. I hope he will be satisfied now. ಮುಂದೆ ಈ ವಿಷಯದ ಬಗೆ ಏನು ಮಾಡಬಹುದು ಎಂಬುದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಮಂತ್ರಿಗಳವರು ಕೊಟ್ಟ ಉತ್ತರದಿಂದ ಸಂತೋಷವಾಯಿತು. ಇಂತಹ ಎರಡೆರಡು ವಿಷಯಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಎತ್ತಿ ಕೊಡು ಸರ್ಕಾರ ಬಿಸಿತೊರಿದರೆ ಅಧಿಕಾರಿಗಳಿಗೆ ಎಚ್ಚರವಾಗುತ್ತದೆ. ಇಂತಹ ಕಾರ್ಯಕ್ರಮಗಳನ್ನು ಜತೆಗೆದುಕೊಂಡು ಇನ್ನು ಮುಂದೆ ಅನ್ಯಾಯ ಆಗುವುದಕ್ಕೆ ಆಸ್ಪದ ಕೊಡುವುದಿಲ್ಲವೆಂಬ ವಿಷಯ ಜನ ಜ್ಞಿತವಾಗಬೇಕು. ಎಲ್ಲಿ ನಿಜವಾದ ಇಂತಹ ಕೇಸುಗಳು ಸರ್ಕಾರದ ಗಮನಕ್ಕೆ ಬರುತ್ತವೆ, ಆವುಗಳನ್ನು ಮಾನ್ಯ ಮಂತ್ರಿಗಳು ಕೈಗೆತ್ತಿಕೊಂಡು ಶೀಘ್ರವಾದಂತಹ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯವನ್ನೇ ನಾವು ಇಟ್ಟುಕೊಂಡಿದ್ದೇವೆ. It a very good suggestion for action.

ಶ್ರೀ ರಾಜೂಗೌಡ.—ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಸಭೆಯ ಮುಂದೆ ತರಬೇಕಾಗಿದೆ.

ಛೇರ್ಮನ್.—ನಾಳೆ ತನ್ನಿ. ಈಗ ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ.

LEGISLATIVE BUSINESS

THE BANGALORE CITY CIVIL COURTS (AMENDMENT) BILL 1980.*

Leave to introduce

SRI Y. RAMAKRISHNA (Hon'ble Minister for Law and Parliamentary Affairs).—Sir, I beg to move :

"That leave be granted to introduce the Bangalore City (Civil Courts (Amendment) Bill, 1980."

MR. SPEAKER.—The qu tion is :

"That leave be granted to introduce the Bangalore City Civil Courts (Amendment) Bill, 1980."

The motion was adopted and leave was granted

SRI Y. RAMAKRISHNA.—Sir, I beg to introduce ;

"The Bangalore City Civil Courts (Amendment) Bill, 1980."

MR. SPEAKER.—The Bill is introduced.

---

* Annexure